# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ವಾರ್ಡ್ ಸಂಖ್ಯೆ 09/ಸಭೆ/ಪಿಆರ್/ /2021-22 ದಿನಾಂಕ : 19/03/2022

**ಮಾನ್ಯ ಆಯುಕ್ತರು ರವರ ಸುತ್ತೋಲೆ ಸಂಖ್ಯೆ ಬಿ12(5)/ಪಿ.ಆರ್/35/2020-21 ದಿನಾಂಕ 21/09/2020ರ ಆದೇಶದ ಅನ್ವಯ ವಾರ್ಡ್ ನಂ 09 ವಿದ್ಯಾರಣ್ಯಪುರ ವಾರ್ಡ್ ಕಛೇರಿಯಲ್ಲಿ ದಿನಾಂಕ 19/03/2022 ರಂದು ನೋಡೆಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ಕೈಗೊಂಡ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ಹಾಜರಿದ್ದ ಅಧಿಕಾರಿ /ನೌಕರರು**

1. ಶ್ರೀ ಶಿವಕುಮಾರ್ ಮುತ್ತುಸ್ವಾಮಿ ಗೌಡರ್, ನೋಡಲ್ ಅಧಿಕಾರಿ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ
2. ಶ್ರೀ ಸೋಮಶೇಖರ್ ಜಿ.ಎಲ್, ಸಹಾಯಕ ಅಭಿಯಂತರರು & ಕಾರ್ಯದರ್ಶಿ ಹಾಗೂ ಸಂಚಾಲಕರು
3. ಶ್ರೀ ಮುತ್ತುರಾಜು ಕೆ.ಪಿ, ಅರಣ್ಯ ವಲಯ
4. ಶ್ರೀ ಧನಲಕ್ಷ್ಮಿ, ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ
5. ಶ್ರೀ ಭಾರ್ಗವ್, ಹಿರಿಯ ಆರೋಗ್ಯ ಪರಿವೀಕ್ಷಕರು
6. ಶ್ರೀ ಸಿದ್ದರಾಜು, ಕಿರಿಯ ಆರೋಗ್ಯ ಪರಿವೀಕ್ಷಕರು

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು**

1. ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು/ಕಾರ್ಯದರ್ಶಿ/ಸದಸ್ಯರು
2. ಸಾರ್ವಜನಿಕರು

**ಶ್ರೀ ಸೋಮಶೇಖರ್ ಜಿ.ಎಲ್, ಸಹಾಯಕ ಅಭಿಯಂತರರು:-** ಸಭೆಗೆ ಹಾಜರಿದ್ದ ಅಧಿಕಾರಿ ಹಾಗೂ ಸದಸ್ಯರನ್ನು ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು.

**ನೋಡೆಲ್ ಅಧಿಕಾರಿ** ರವರು ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು./

**ವಸತಿ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು**

ಬುಲೆಟ್ ಕೃಷ್ಣಪ್ಪ ಬಡಾವಣೆ, ಮುನಿಸ್ವಾಮಪ್ಪ ಬಡಾವಣೆಯಲ್ಲಿ ಕಾವೇರಿ ನೀರು ಸರಬರಾಜಾಗುತ್ತಿರುವುದಿಲ್ಲವೆಂದು ಹಾಗೂ ಏರು ಪ್ರದೇಶಗಳಲ್ಲಿ ನೀರು ಸರಬರಾಜಾಗುತ್ತಿರುವುದಿಲ್ಲವೆಂದು ಬಿ.ಇ.ಎಲ್ ಲೇಔಟ್, ಹೆಚ್.ಎಂ.ಟಿ ಲೇಔಟ್‌ಗಳಲ್ಲಿ ನೀರು ಪೂರೈಕೆಯಾಗುವಾಗ ವಿದ್ಯುತ್ ವ್ಯತ್ಯಯ ಉಂಟಾಗಿ ನೀರು ಸರಬರಾಜಾಗುತ್ತಿರುವುದಿಲ್ಲವೆಂದು ಸರಿಪಡಿಸಲು ಕೋರಿದರು.

ಕ್ರಮ ಸ.ಕಾ.ಅ, ಬಿಡಬ್ಲ್ಯೂಎಸ್ಎಸ್‌ಬಿ

ಸೋಮಣ್ಣ ಗಾರ್ಡನ್, ಸಪ್ತಗಿರಿ ಬಡಾವಣೆ, ಹೆಚ್.ಎಂ.ಟಿ ಲೇಔಟ್ 7ನೇ ಬ್ಲಾಕ್, ಗುರುದರ್ಶನ್ ಲೇಔಟ್, ಸರ್ ಎಂ.ವಿ ಬಡಾವಣೆ 5ನೇ ಅಡ್ಡರಸ್ತೆಯಲ್ಲಿ ರಸ್ತೆಗೆ ಹಾಗೂ ಮನೆಗೆ ಅಡ್ಡಲಾಗಿ ಬೆಳೆದಿರುವ ಮರದ ರೆಂಬೆ ಕೊಂಬೆಗಳನ್ನು ಟ್ರಿಮ್ ಮಾಡಲು ಕೋರಿದರು. ಬೆಸ್ಕಾಂ ರವರು ಕತ್ತರಿಸಿದ ಮರದ ರೆಂಬೆ ಕೊಂಬೆಗಳನ್ನು ಅಲ್ಲಿಯೇ ಬಿಟ್ಟು ಹೋಗುತ್ತಿರುವುದರಿಂದ ತೆರವುಗೊಳಿಸಲು ಕೋರಿದರು.

ಕ್ರಮ: ಉಪವಲಯ ಅರಣ್ಯ ಸಂರಕ್ಷಣಾಧಿಕಾರಿ, ಬ್ಯಾಟರಾಯನಪುರ

ಯು.ಜಿ ಕೇಬಲ್ ಅಳವಡಿಸಲು ವಾರ್ಡಿನ ಬಹುತೇಕ ಎಲ್ಲಾ ರಸ್ತೆಗಳನ್ನು ಕತ್ತರಿಸಿ ಹಾಗೆಯೇ ಬಿಟ್ಟಿರುವುದರಿಂದ ವಾಹನ ಸವಾರರಿಗೆ ಹಾಗೂ ಸ್ಥಳೀಯ ನಿವಾಸಿಗಳಿಗೆ ತೊಂದರೆಯಾಗುತ್ತಿರುವುದರಿಂದ ಕಾಮಗಾರಿಯನ್ನು ಬೇಗನೇ ಪೂರ್ಣಗೊಳಿಸಲು ಕೋರಿದರು.

**ಕ್ರಮ:** ಸಕಾಅ, ಬೆಸ್ಕಾಂ

ನರಸೀಪುರ, ಸಪ್ತಗಿರಿ ಬಡಾವಣೆ, ಬುಲೆಟ್ ಕೃಷ್ಣಪ್ಪ ಬಡಾವಣೆ, ಹೆಚ್.ಎಂ.ಟಿ ಬಡಾವಣೆಗಲ್ಲಿ ರಸ್ತೆ ಗುಡಿಸುವಿಕೆ ಕಾರ್ಯ ಸಮರ್ಪಕವಾಗಿ ನಿರ್ವಹಿಸಲು, ಸೋಮಣ್ಣ ಗಾರ್ಡನ್‌ನ ಖಾಲಿ ನಿವೇಶನದಲ್ಲಿ ಕಸ ಸುರಿದು ಹೋಗುತ್ತಿರುವುದರಿಂದ ಅಕ್ಕಪಕ್ಕದ ನಿವಾಸಿಗಳಿಗೆ ವಾಸನೆ ಬರುತ್ತಿರುವುದಾಗಿ ದೂರು ನೀಡಿರುತ್ತಾರೆ.

ಕ್ರಮ: ಸಕಾಅ. ಘ.ತ್ಯಾ.ನಿ

ವಾರ್ಡಿನ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ಆದಷ್ಟು ಬೇಗ ಮುಚ್ಚಲು ಕ್ರಮ ವಹಿಸಲು ಕೋರಿದರು, ತಿಂಡ್ಲು ಸರ್ಕಲ್‌ನಿಂದ ನಂಜಪ್ಪ ಸರ್ಕಲ್ ಕಡೆ ಹಾದು ಹೋಗುವ ರಸ್ತೆ ಸಂಪೂರ್ಣ ಹಾಳಾಗಿರುವುದರಿಂದ ಸದರಿ ರಸ್ತೆಗೆ ಡಾಂಬರೀಕರಣ ಮಾಡಲು ಹಾಗೂ ತಿಂಡ್ಲು, ನರಸೀಪುರ ಬಡಾವಣೆ, ಎನ್.ಟಿ.ಐ ಬಡಾವಣೆ, ಗುರುದರ್ಶನ್ ಲೇಔಟ್, ಜ್ಞಾನೇಶ್ವರಿ ಲೇಔಟ್, ಸಪ್ತಗಿರಿ ಬಡಾವಣೆಗಳ ರಸ್ತೆಗಳ ಚರಂಡಿಗಳಲ್ಲಿ ಹೂಳು ಮತ್ತು ಮಣ್ಣು ತುಂಬಿರುವುದರಿಂದ ಮಳೆ ಬಂದಾಗ ನೀರು ಚರಂಡಿಯಲ್ಲಿ ಹರಿಯದೆ ರಸ್ತೆಗೆ ಬರುವುದರಿಂದ ಚರಂಡಿಯಲ್ಲಿ ತುಂಬಿರುವ ಹೂಳು ಮತ್ತು ಮಣ್ಣನ್ನು ತೆರವುಗೊಳಿಸಲು ಕೋರಿದರು.

**ಕ್ರಮ:** ಸ.ಕಾ.ಅ, ವಿಉವಿ

ನೋಡೆಲ್ ಅಧಿಕಾರಿಗಳು ಈ ಮೇಲ್ಕಂಡ ಅಂಶಗಳ ಬಗ್ಗೆ ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳು ಹಾಗೂ ಸದಸ್ಯರೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನೋಡಲ್ ಅಧಿಕಾರಿ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರರು
ವಿದ್ಯಾರಣ್ಯಪುರ ಉಪವಿಭಾಗ

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ 09, ವಿದ್ಯಾರಣ್ಯಪುರ

ಪ್ರತಿಯನ್ನು:
1. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಮಾನ್ಯ ಅಪರ ಆಯುಕ್ತರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಮುಖ್ಯ ಅಭಿಯಂತರರು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ರವರ ಮಾಹಿತಿಗಾಗಿ ಸಲ್ಲಿಸಿದೆ.
9. ವಾರ್ಡ್ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ ಸಲ್ಲಿಸಿದೆ.
10. ಕಛೇರಿ ಕಡತಕ್ಕೆ.